# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:-ಶ್ರೀ ಡಿ. ಲಿಂಗಮಾಂತು, ಹಿಂದಿನ ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ, [ಪ್ರಭಾರಿ] ಜಲಾನಯನ ಅಭಿವೃದ್ಧಿ ಇಲಾಖೆ, ಬೀದರ್ ಇವರ ವಿರುದ್ಧ ಶಿಸ್ತು ಕ್ರಮ.

**ಓದಲಾಗಿದೆ:-**

[1] ಸರ್ಕಾರದ ಕಾರಣ ಕೇಳುವ ಪತ್ರ ಸಂ. ಕೃತೋಇ 57 ಕೃಪವಿ 2007, ದಿನಾಂಕ: 31-10-2007

[2] ಶ್ರೀ ಡಿ. ಲಿಂಗಮಾಂತು ಹಿಂದಿನ ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ, [ಪ್ರಭಾರಿ] ಜಲಾನಯನ ಅಭಿವೃದ್ಧಿ ಇಲಾಖೆ, ಬೀದರ ಇವರ ಲಿಖಿತ ಹೇಳಿಕೆ ದಿನಾಂಕ: 02-11-2007

[3] ಸರ್ಕಾರದ ಆದೇಶ ಸಂಖ್ಯೆ: ಕೃತೋಇ 57 ಕೃಪವಿ 2007, ದಿನಾಂಕ: 02-09-2009.

[4] ಶ್ರೀ ಫ.ನಿ.ಗುಡ್ಡಾಕಾರ,ನಿವೃತ್ತ ಜಿಲ್ಲಾ ಮತ್ತು ಸೇಶನ್ಸ ನ್ಯಾಯಾಧೀಶರು, ಹಾಗೂ ವಿಚಾರಣಾಧಿಕಾರಿಗಳು ಧಾರವಾಡ ಇವರ ವಿಚಾರಣಾ ವರದಿ ದಿನಾಂಕ: 20-01-2010.

[5] ಸರ್ಕಾರದ 2ನೇ ಕಾರಣ ಕೇಳುವ ನೋಟಿಸು ಸಂ. ಕೃತೋಇ 07 ಕೃಪವಿ 2007, ದಿನಾಂಕ: 20-02-2010.

[6] ಶ್ರೀ ಡಿ.ಲಿಂಗಮಾಂತು, ಹಿಂದಿನ ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ,[ಪ್ರಭಾರಿ] ಜಲಾನಯನ ಅಭಿವೃದ್ಧಿ ಇಲಾಖೆ, ಬೀದರ ಇವರ ಲಿಖಿತ ಹೇಳಿಕೆ ದಿನಾಂಕ: 16-03-2010.

**ಪ್ರಸ್ತಾವನೆ:-**

ಮೇಲೆ ಕ್ರ.ಸಂ.[1]ರಲ್ಲಿ ಓದಲಾದ ದಿನಾಂಕ: 31-10-2007ರ ಸರ್ಕಾರದ ಕಾರಣ ಕೇಳುವ ಪತ್ರದಲ್ಲಿ ಶ್ರೀ ಡಿ. ಲಿಂಗಮಾಂತು, ಸಹಾಯಕ ಕೃಷಿ ನಿರ್ದೇಶಕರು, ಇವರು ಈ ಹಿಂದೆ ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ, ಜಲಾನಯನ ಅಭಿವೃದ್ಧಿ ಇಲಾಖೆ, ಬೀದರ್ ಆಗಿ ಪ್ರಭಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾಗ 2007-08ನೇ ಸಾಲಿನಲ್ಲಿ ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆಯಡಿಯಲ್ಲಿ ಬೀದರ ಜಿಲ್ಲೆಯ ಜಲಾನಯನ ಸಂಘಗಳಿಗೆ ಸರಬರಾಜು ಮಾಡಲು ಶಾಖಾ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಸರ್ಕಾರ ಮಾರಾಟ ಮಹಾ ಮಂಡಳ ನಿಯಮಿತ ಬಾಗಲಕೋಟೆ ಶಾಖೆಯಿಂದ ರೂ. 01,80,000/-ಗಳ ವೆಚ್ಚದಲ್ಲಿ 50 ಕ್ವಿಂಟಾಲ್ ಹೆಮಟಾ ಹುಲ್ಲಿನ ಬೀಜ ಖರೀದಿಸಿದ್ದು, ಹೀಗೆ ಖರೀದಿ ಮಾಡುವಾಗ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 ಮತ್ತು ನಿಯಮಗಳು 2000 ಹಾಗೂ ಸುತ್ತೋಲೆ 4(3)(ii)ರನ್ವಯ ಇರುವ ಯಾವುದೇ ವಿಧಿ ವಿಧಾನಗಳನ್ನು ಪಾಲಿಸದೇ ಖರೀದಿಸಿರುತ್ತಾರೆ, ಹಾಗೂ ಈ ಖರೀದಿಗೆ ಮುನ್ನ ಕೇಂದ್ರ ಕಚೇರಿಯ ಅನುಮೋದನೆ ಪಡೆಯದೇ, ಬೀಜದ ಕನಿಷ್ಠ ಮೊಳಕೆ ಪ್ರಮಾಣ ಮತ್ತು ಶುದ್ಧತೆಯ ಬಗ್ಗೆ ಸಹ ಖಾತರಿಪಡಿಸಿಕೊಳ್ಳದೆ, ಖರೀದಿ ಮಾಡಿ ಇಲಾಖಾ ನಿಯಮಗಳನ್ನು ಉಲ್ಲಂಘಿಸಿದ್ದಾರೆಂದು, ಕೆ.ಸಿ.ಎಸ್. (ಸಿ.ಸಿ.ಎ) ನಿಯಮಗಳಡಿ ಅಪಾದನಾ ಪಟ್ಟಿಯನ್ನು ಅವರಿಗೆ ಜಾರಿ ಮಾಡಲಾಗಿತ್ತು.

ಮುನ್ನ ಕೇಂದ್ರ ಕಚೇರಿಯ ಅನುಮೋದನೆ ಪಡೆಯಬೇಕಾಗಿತ್ತು. ಆದರೆ ಸದರಿ ಅಧಿಕಾರಿಯವರು ಕೇಂದ್ರ ಕಚೇರಿಯ ಅನುಮೋದನೆ ಪಡೆಯದೇ ಅಧೀನ ಕಚೇರಿಯ ಅಧಿಕಾರಿಗಳನ್ನು ಹಾಗೂ ಜಲಾನಯನ ಸಮಿತಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೇ ಜಿಲ್ಲಾ ಮಟ್ಟದ ಕಚೇರಿಯಲ್ಲಿಯೇ, ಪ್ರತಿ ತಾಲ್ಲೂಕಿಗೆ ಬೀಜದ ಪ್ರಮಾಣ ಲೆಕ್ಕ ಮಾಡಿ, ನೇರವಾಗಿ, ಖರೀದಿ ಮಾಡಲಾಗಿದೆ.

ಸದರಿಯವರ ಮೇಲಿನ **3ನೇ ಆರೋಪವೇನೆಂದರೆ,** ಇಲಾಖಾ ಸುತ್ತೋಲೆಯನ್ವಯ, ಹುಲ್ಲಿನ ಬೀಜದ ಖರೀದಿಗೆ ಮುನ್ನ ಖರೀದಿ ನಿಯಮಾನುಸಾರ, ಮತ್ತು ಭಾರತ ಸರ್ಕಾರದ ಕೃಷಿ ಮಂತ್ರಾಲಯದಡಿ, ಬರುವ ಬೀಜ ಗುಣಮಟ್ಟ ನಿಯಂತ್ರಣದಡಿ ಬಿತ್ತನೆ ಬೀಜದ ಕನಿಷ್ಠ ಪ್ರಮಾಣದಲ್ಲಿ, ಸದರಿ ಬೀಜದ ನೈಜತೆಯ ಬಗ್ಗೆ ಖಾತರಿ ಪಡಿಸಿಕೊಳ್ಳದೆ ಇಲಾಖಾ ಮಾರ್ಗಸೂಚಿಗಳನ್ನು ಉಲ್ಲಂಘಿಸಿರುತ್ತಾರೆ.

ಹಾಗೂ ಇವರ ಮೇಲಿನ **4ನೇ ಆರೋಪವೇನಂದರೆ,** ಅವರು ಖರೀದಿಯ ಕ್ರಮಬದ್ಧತೆಯ ಪರಿಶೀಲನೆಗಾಗಿ, ಸಂಬಂಧಿಸಿದ ಕಡತವನ್ನು ಜಲಾನಯನ ಅಭಿವೃದ್ಧಿ ಇಲಾಖೆ, ಕೇಂದ್ರ ಕಚೇರಿಗೆ ಸಲ್ಲಿಸುವಂತೆ ದಿನಾಂಕ: 20-06-07ರಂದು ಸತತವಾಗಿ ದೂರವಾಣಿಯ ಮೂಲಕ ತಿಳಿಸಿದನಂತರ ಪ್ರಥಮ ದರ್ಜೆ ಸಹಾಯಕರ ಮುಖಾಂತರ ಅಪೂರ್ಣವಾದ ದಾಖಲೆಗಳನ್ನು ತುಂಬಾ ತಡವಾಗಿ ಕೇಂದ್ರ ಕಚೇರಿಗೆ ಕಳುಹಿಸಿ ಕೊಡುವ ಮೂಲಕ ಕರ್ತವ್ಯ ಲೋಪವೆಸಗಿರುತ್ತಾರೆ.

ಮೇಲಿನ ಆರೋಪಗಳಿಗೆ ಸಂಬಂಧಿಸಿದಂತೆ ವಿಚಾರಣಾಧಿಕಾರಿಯವರು ನೀಡಿದ ವರದಿಯಲ್ಲಿ ಅವರ ಮೇಲಿನ ಆರೋಪಗಳು ಸಾಬಿತಾಗಿರುವುದರಿಂದ ಎರಡನೇ ಕಾರಣ ಕೇಳುವ ಪತ್ರವನ್ನು ವಿಚಾರಣಾ ವರದಿಯೊಂದಿಗೆ ಜಾರಿ ಮಾಡಿ ಅದಕ್ಕೆ **ಶ್ರೀ ಡಿ. ಲಿಂಗಮಾಂತು,** ಹಿಂದಿನ ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿ, ಬೀದರ (ಪ್ರಭಾರಿ) ಇವರು ಈ ಕೆಳಕಂಡಂತೆ ಲಿಖಿತ ಹೇಳಿಕೆ ನೀಡಿರುತ್ತಾರೆ.

ಸದರಿ ಹೇಳಿಕೆಯಲ್ಲಿ, ಡಿ.ಡಬ್ಲ್ಯು.ಡಿ.ಪಿ. -2 ಮತ್ತು 3 ಯೋಜನೆಗಳನ್ನು ಅನುಷ್ಠಾನವನ್ನು ಋತುಮಾನ ಕಾಲಕ್ಕೆ ಸಾಧಿಸುವ ಸಲುವಾಗಿ ಕ್ರಿಯಾ ಯೋಜನೆಗಳಿಗೆ ಮಂಜೂರಾತಿ ನಿರೀಕ್ಷಿಸಿ, ಅನುಷ್ಠಾನಗೊಳಿಸಿ ಕೇಂದ್ರ ಸರ್ಕಾರದಿಂದ ಸಕಾಲದಲ್ಲಿ 2ನೇ ಕಂತಿನ ಅನುದಾನ ಪಡೆದಿರುವುದು ಬೀದರ ಜಿಲ್ಲೆಯ ಇತಿಹಾಸದಲ್ಲಿ ಪ್ರಥಮವಾಗಿದೆ. ಅನಿವಾರ್ಯ ಕಾರಣಗಳಿಂದ ಮಾರ್ಪಾಡು ಮಾಡಿಕೊಂಡರು ಯಶಸ್ವಿಯಾಗಿ ಕಾರ್ಯಕ್ರಮ ಅನುಷ್ಠಾನಗೊಳಿಸಿರುವುದನ್ನು ಪರಿಗಣಿಸದಿರುವುದು ವಿಷಾದನೀಯವೆಂದು ತಿಳಿಸಿರುತ್ತಾರೆ. ಅಲ್ಲದೇ ತಾವು ರೂ. 1.80 ಲಕ್ಷ ಮೊತ್ತದಲ್ಲಿ ಹೆಮಟ್ಟ್ಯಾ ಹುಲ್ಲಿನ ಬೀಜ ಖರೀದಿ ಮಾಡಿದ್ದರೂ ಇದನ್ನು ಪ್ರತ್ಯೇಕವಾಗಿ 5 ತಾಲ್ಲೂಕುಗಳಿಗೆ ತಲಾ 9.5 ಕ್ವಿಂ. ಯಿಂದ 11.00 ಕ್ವಿಂಟಾಲ್ ಪ್ರಮಾಣವನ್ನು ರೂ. 34,200/- ರಿಂದ ರೂ. 39,600/-ರವರೆಗೆ ಸರಬರಾಜನ್ನು ಸರ್ಕಾರಿ ಸಾಮ್ಯದ

ಕೆ.ಎಸ್. ಸಿ.ಎಮ್. ಎಫ್ ಸಂಸ್ಥೆಯಿಂದ ಪಡೆಯಲಾಗಿದೆ. ಈ ಹಿನ್ನೆಲೆಯಲ್ಲಿ ಪಾರದರ್ಶಕತೆ ಉಲ್ಲಂಘನೆಯಾಗಿಲ್ಲವೆಂದು ವಿಚಾರಣಾಧಿಕಾರಿಯವರ ಮುಂದೆ ಹೇಳಿದ್ದಾರೆ. ಅದಲ್ಲದೇ ಕೇಂದ್ರ ಸರ್ಕಾರದ ಹರ್ಯಾಳಿ ಮಾರ್ಗಸೂಚಿಯ ಪ್ರಕಾರ ಆಯಾ ಗ್ರಾಮ ಪಂಚಾಯಿತಿಯ ಜಲಾನಯನ ಸಮಿತಿಗಳಿಗೆ ನಿರ್ಣಯಿಸುವ ಅಧಿಕಾರವಿರುವುದರಿಂದ ಸಮಿತಿ ಹಾಗೂ ತಾಲ್ಲೂಕು ಜಲಾನಯನ ಅಭಿವೃದ್ಧಿ ಅಧಿಕಾರಿಗಳ ಬೇಡಿಕೆ ಪ್ರಕಾರವೇ ಹುಲ್ಲಿನ ಬೀಜ ಪೂರೈಕೆಯಾಗಿದೆ. ಸದರಿ ಹುಲ್ಲಿನ ಬೀಜ ಬೀದರ ಜಿಲ್ಲೆಯ ಕೃಷಿ ವಿಜ್ಞಾನ ಕೇಂದ್ರ ವರದಿಯ ನಂತರ ಸಂಸ್ಥೆಗೆ ಹಣ ಪಾವತಿಸಲಾಗಿದೆಯೆಂದು ಮತ್ತು ಕೇಂದ್ರ ಕಚೇರಿಯ ಅನುಮೋದನೆ ಪಡೆಯದಿರುವುದಕ್ಕೆ, ಉತ್ತರವಾಗಿ ಅವರು ದಿನಾಂಕ: 20-06-2007ರಂದು ಕೇಂದ್ರ ಕಚೇರಿಗೆ ದೂರವಾಣಿಯ ಮೂಲಕ ಮಾಹಿತಿ ತಿಳಿಸಲಾಗಿದೆಯೆಂದು ಸಹ ತಮ್ಮ ಹೇಳಿಕೆಯಲ್ಲಿ ಹೇಳಿರುತ್ತಾರೆ. ಅದಲ್ಲದೇ ಮಾಹಿತಿ ಕೋರಿದ ಕೇಂದ್ರ ಸ್ಥಾನ ಬೀದರನಿಂದ 800 ಕಿ.ಮಿ. ದೂರದಲ್ಲಿ ಇರುವುದು ಕಾರಣವಾಗಿದೆ ಎಂದು ಸಹ ಹೇಳಿರುತ್ತಾರೆ.

ಶ್ರೀ ಡಿ. ಲಿಂಗಮಾಂತುರವರ ಮೇಲ್ಕಂಡ ಹೇಳಿಕೆಗಳನ್ನು ಪರಿಶೀಲಿಸಲಾಗಿ ಕೇಂದ್ರ ಕಚೇರಿಯ ಅನುಮೋದನೆ ಪಡೆಯದೇ ಇರುವುದು ಸ್ಪಷ್ಟವಾಗಿರುತ್ತದೆ. ಮತ್ತು ತಮ್ಮ ಹೇಳಿಕೆಗೆ ಸಂಬಂಧಿಸಿದಂತೆ ಪೂರಕ ದಾಖಲೆಗಳನ್ನು ನೀಡಿರುವುದಿಲ್ಲ. ನಿವೃತ್ತ ಜಿಲ್ಲಾ ಮತ್ತು ಸೇಶನ್ಸ ನ್ಯಾಯಾಧೀಶರಾದ ವಿಚಾರಣಾಧಿಕಾರಿಯವರು, ಅವರ ಮೇಲಿನ ಆರೋಪಗಳಿಗೆ ಸಂಬಂಧಿಸಿದಂತೆ, ಇದಕ್ಕೆ ಪೂರಕವಾದ ದಾಖಲೆ ಹಾಗೂ ಪ್ರಾಶಿಕ್ಯೂಶನ್ ಸಾಕ್ಷಿದಾರರ ಹೇಳಿಕೆಗಳನ್ನು ಪರಿಶೀಲಿಸಿ, ವಿಚಾರಣೆ ನಡೆಸಿ, ಅವರ ಮೇಲಿನ ಆರೋಪಗಳು ಸಾಬಿತಾಗಿದೆಯೆಂದು ನೀಡಿದ ವಿಚಾರಣೆ ವರದಿಯನ್ನು ಒಪ್ಪಿ, ಶ್ರೀ ಡಿ. ಲಿಂಗಮಾಂತು, ಹಿಂದಿನ ಸಹಾಯಕ ಕೃಷಿ ನಿರ್ದೇಶಕರು,(ಕೇಂದ್ರ), ಹಾಗೂ ಪ್ರಭಾರಿ ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು ಬೀದರ ಇವರಿಗೆ ದಂಡನೆ ವಿಧಿಸಲು ನಿರ್ದರಿಸಿದೆ. ಅದಲ್ಲದೇ ಈ ಪ್ರಕರಣದಲ್ಲಿ ಅವರು ದುರುಪಯೋಗಪಡಿಸಿಕೊಂಡು, ಸರ್ಕಾರಕ್ಕೆ ನಷ್ಟವಾಗಿರುವ ರೂ. 01,80,000/-ಅವರಿಂದ ವಸೂಲು ಮಾಡಲು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕೃತೋಇ 57 ಕೃಪವಿ 2007**

**ಬೆಂಗಳೂರು, ದಿನಾಂಕ: 16ನೇ ಆಗಸ್ಟ್ 2011**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ಶ್ರೀ ಡಿ. ಲಿಂಗಮಾಂತು, ಹಿಂದಿನ ಸಹಾಯಕ ಕೃಷಿ ನಿರ್ದೇಶಕರು,(ಕೇಂದ್ರ), ಹಾಗೂ ಪ್ರಭಾರಿ ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು ಬೀದರ, ಇವರಿಗೆ, ಅವರು ಪಡೆಯುತ್ತಿರುವ ಕಾಲಿಕ ವೇತನ ಶ್ರೇಣಿಯಲ್ಲಿ ಒಂದು ಹಂತವನ್ನು ಅವರು

18



ನಿವೃತ್ತಿ ಹೊಂದುವವರೆಗೆ ಕೆಳಗಿಳಿಸುವ ದಂಡನೆಯನ್ನು ಕೆ.ಸಿ.ಎಸ್(ಸಿ.ಸಿ.ಎ) ನಿಯಮ 8(iv-ಎ)ರನ್ವಯ ವಿಧಿಸಿ ಆದೇಶಿಸಿದೆ ಮತ್ತು ಅವರಿಂದ ಸರ್ಕಾರಕ್ಕಾಗಿರುವ ನಷ್ಟ ರೂ. 1,80,000 (ರೂಪಾಯಿ ಒಂದು ಲಕ್ಷದಾ ಎಂಬತ್ತು ಸಾವಿರಗಳು ಮಾತ್ರ) ಕೆ.ಸಿ.ಎಸ್.(ಸಿ.ಸಿ.ಎ) ನಿಯಮ 8 (iv)ರನ್ವಯ ಅವರಿಂದ ವಸೂಲು ಮಾಡಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

Manjunath 16/08/11
(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.
16/8/11

1] ಮಹಾಲೇಖಪಾಲರು, (ಲೆಕ್ಕಪತ್ರ ಮತ್ತು ಲೆಕ್ಕ ತಪಾಸಣೆ) ಕರ್ನಾಟಕ ಬೆಂಗಳೂರು.
2] ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ ಬೆಂಗಳೂರು.
3] ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು.
4] ಜಂಟಿ ಕೃಷಿ ನಿರ್ದೇಶಕರು, ಬೀದರ, ಗುಲಬರ್ಗಾ ಜಿಲ್ಲೆ.
5] ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು, ಜಲಾನಯನ ಅಭಿವೃದ್ಧಿ ಇಲಾಖೆ, ಬೀದರ್
6] ಸಹಾಯಕ ಕೃಷಿ ನಿರ್ದೇಶಕರು, ಬೀದರ್.
7] ಸಹಾಯಕ ಕೃಷಿ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಬೀದರ, ಬೀದರ ಜಿಲ್ಲೆ.
8] ಸಹಾಯಕ ಕೃಷಿ ನಿರ್ದೇಶಕರು, ಸೇಡಂ, ಗುಲಬರ್ಗಾ ಜಿಲ್ಲೆ.
9] ಸರ್ಕಾರದ ಕಾರ್ಯದರ್ಶಿ, ಕೃಷಿ ಇಲಾಖೆ, ಅವರ ಆಪ್ತ ಕಾರ್ಯದರ್ಶಿ, ಬೆಂಗಳೂರು.
10] ಜಂಟಿ ಕಾರ್ಯದರ್ಶಿ, ಕೃಷಿ ಇಲಾಖೆ, ಅವರ ಆಪ್ತ ಸಹಾಯಕರು, ಬೆಂಗಳೂರು.
11) ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿ,ವಿಧಾನಸೌಧ, ಬೆಂಗಳೂರು.
12] ಸಂಬಂಧಪಟ್ಟ ಅಧಿಕಾರಿಯವರಿಗೆ ( ಕೃಷಿ ಆಯುಕ್ತರ ಮೂಲಕ)
13) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.